RNU AIR DHARWAD

MAY 19, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

***‘ಪ್ರಧಾನಮಂತ್ರಿ ಸೂರ್ಯ ಘರ್, ಮುಫ್ತ್ ಬಿಜಲಿ ಯೋಜನೆ’ಯ*** ರಾಜ್ಯವ್ಯಾಪಿ ಪ್ರಚಾರಕ್ಕಾಗಿ, ಎಲ್.ಇ.ಡಿ. ಮೊಬೈಲ್ ವ್ಯಾನ್ ಅಭಿಯಾನಕ್ಕೆ, ಇಂಧನ ಇಲಾಖೆಯ, ಅಪರ ಮುಖ್ಯ ಕಾರ್ಯದರ್ಶಿ, ಗೌರವ ಗುಪ್ತ, ಬೆಂಗಳೂರಿನ ಬೆಸ್ಕಾಂ ಕಾರ್ಪೋರೆಟ್ ಕಚೇರಿಯಲ್ಲಿ, ಚಾಲನೆ ನೀಡಿದ್ದಾರೆ. ಈ ವೇಳೆ ಮಾತನಾಡಿದ ಅವರು, “15 ದಿನಗಳ ಎಲ್.ಇ.ಡಿ. ಮೊಬೈಲ್ ವ್ಯಾನ್ ಪ್ರಚಾರ ಅಭಿಯಾನ, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ, ರಾಜ್ಯದ ಪ್ರಮುಖ ನಗರಗಳಲ್ಲಿ ನಡೆಯಲಿದೆ” ಎಂದರು. ‘ಸೌರ ಮಾಸ, ಮೇ 2026’ ಉಪಕ್ರಮದ ಭಾಗವಾಗಿ, ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ, ರಾಜ್ಯದಲ್ಲಿ ಇದು ವರೆಗೆ, ಒಟ್ಟು 19 ಸಾವಿರದ 293 ಸೌರ ಘಟಕಗಳನ್ನು ಸ್ಥಾಪಿಸಲಾಗಿದ್ದು, 77 ದಶಾಂಶ 5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಹೆಚ್ಚುವರಿ ವಿದ್ಯುತ್ತನ್ನು ಗ್ರಿಡ್ ಗೆ ವರ್ಗಾಯಿಸಿಕೊಂಡು, ಎಸ್ಕಾಂಗಳು, ಹಣ ಪಾವತಿಸುತ್ತಿವೆ ಎಂದು, ತಿಳಿಸಿದರು.

<><><>

**ಗದಗ ಜಿಲ್ಲೆ, ಲಕ್ಕುಂಡಿಯ, ನೂರೊಂದು ಬಾವಿ,** ನೂರೊಂದು ದೇವಾಲಯಗಳನ್ನು, ರಾಷ್ಟ್ರೀಯ ಉನ್ನತ ಶಿಕ್ಷಣ ಅಧ್ಯಯನ ಸಂಸ್ಥೆ ಸಹಕಾರದಲ್ಲಿ, ಸ್ಯಾಟ್‌ಲೈಟ್ ಇಮೇಜಿಂಗ್ ಟೆಕ್ನಾಲಜಿ ಬಳಸಿ, ಶೀಘ್ರ ಪತ್ತೆ ಹಚ್ಚಿ, ಅನಾವರಣ ಗೊಳಿಸಲಾಗುವುದು ಎಂದು, ಪ್ರವಾಸೋದ್ಯಮ ಖಾತೆ ಸಚಿವ, ಎಚ್.ಕೆ. ಪಾಟೀಲ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ಎನ್.ಐ.ಎ.ಎಸ್. ವಿಜ್ಞಾನಿಗಳೊಂದಿಗೆ ಸಭೆ ನಡೆಸಿದ ಸಚಿವರು, ಮುಂಬರುವ ಡಿಸೆಂಬರ್ 1ರ ಒಳಗೆ, 101 ಬಾವಿ ಮತ್ತು 101 ದೇವಾಲಯಗಳನ್ನು ಅನಾವರಣಗೊಳಿಸಲು, ಯೋಜಿಸಲಾಗಿದೆ. ಲಕ್ಕುಂಡಿಯನ್ನು, ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ, ಸೇರಿಸಲು ಪ್ರಸ್ತಾವ ಸಿದ್ಧಪಡಿಸುವ ಕಾರ್ಯ, ಪ್ರಗತಿಯಲ್ಲಿದೆ, ಎಂದರು.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು,** ಹಜಾರರಾಮ ದೇವಸ್ಥಾನದ, ಉತ್ತರ ಭಾಗದಲ್ಲಿ ನಡೆದಿರುವ ಉತ್ಖನನದ ವೇಳೆ, ಎರಡು ಆಳ್ವಾರ್ ಮೂರ್ತಿಗಳ ಭಗ್ನ ಅವಶೇಷಗಳ ಪತ್ತೆಯಾಗಿವೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ಮಾಹಿತಿ ನೀಡಿ, ಹಂಪಿಯಲ್ಲಿ ಈ ವರೆಗೆ ನಡೆದ, ಉತ್ಖನನದ ವೇಳೆ, ಆಳ್ವಾರ್ ಪ್ರತಿಮೆಗಳು ಸಿಕ್ಕ ನಿದರ್ಶನಗಳಿಲ್ಲ. ಈ ಪ್ರತಿಮೆಗಳು, ವಿಜಯನಗರ ಕಾಲದ ಇತಿಹಾಸದ ಮೇಲೆ, ಹೊಸ ಬೆಳಕು ಚೆಲ್ಲಲು ಸಹಕಾರಿಯಾಗಲಿದೆ ಎಂದರು.

<><><>

**ಇ–ಮೆಡಿಸಿನ್, ಆನ್ಲೈನ್ ಔ ’ಧ** ಮಾರಾಟ ನೀತಿ ವಿರೋಧಿಸಿ, ಅಖಿಲ ಭಾರತ ಔ ’ಧ ವ್ಯಾಪಾರಿಗಳ ಒಕ್ಕೂಟ, ಔಷಧ ಅಂಗಡಿಗಳ, ದೇಶವ್ಯಾಪಿ ಬಂದ್‌ಗೆ ಕರೆ ನೀಡಿತ್ತು. ಧಾರವಾಡ ಜಿಲ್ಲೆ, ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ವ್ಯಾಪಾರಿಗಳ ಸಂಘದ, ಕಾರ್ಯದರ್ಶಿ, ಮಲ್ಲಿಕಾರ್ಜುನ ಮಠಪತಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

<><><>

**ವೈದ್ಯಕೀಯ, ಇಂಜಿನಿಯರಿಂಗ್ ಸೀಟು ಆಯ್ಕೆ ವೇಳೆ,** ವಿದ್ಯಾರ್ಥಿಗಳಿಗೆ ನೆರವಾಗಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ***ಕೆ.ಇ.ಎ. ಕನೆಕ್ಟ್ ಆಪ್*** ಸಿದ್ಧ ಪಡಿಸಿದ್ದು, ಅನುಭವಿ ಅಧ್ಯಾಪಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು, ಮಾರ್ಗದರ್ಶನ ಮಾಡಲಿದ್ದಾರೆ. 2026–27ನೇ ಸಾಲಿನಲ್ಲಿ, ನೀಟ್, ಸಿ.ಇ.ಟಿ. ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆಯುವ ವಿದ್ಯಾರ್ಥಿಗಳು, ತಮ್ಮ ಆದ್ಯತೆಯ ಕಾಲೇಜುಗಳನ್ನು ಆಯ್ಕೆಮಾಡಲು, *ಕನೆಕ್ಟ್* ಆಪ್ ಸಹಾಯ ಮಾಡಲಿದೆ.

<><><>

**ಬಾಗಲಕೋಟೆ ಜಿಲ್ಲೆಯ,** ಕೃಷ್ಣ, ಮಲಪ್ರಭಾ ಹಾಗೂ ಘಟಪ್ರಭಾ ನದಿಗಳ ದಂಡೆಯ ಮೇಲೆ ನಡೆಯುತ್ತಿರುವ, ಮರಳು ಅಕ್ರಮ ಗಣಿಗಾರಿಕೆ ದೂರುಗಳನ್ನು ಆಧರಿಸಿ, ಹುನಗುಂದ, ಇಳಕಲ್, ಮುಧೋಳ ಹಾಗೂ ಬಾದಾಮಿ ತಾಲೂಕುಗಳಲ್ಲಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಜೊತೆ, ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು.

<><><>

**ಕಲ್ಯಾಣ ಕರ್ನಾಟಕದ ವಿವಿಧ** ಜಿಲ್ಲೆಗಳಲ್ಲಿ, ಸುರಿದ ಭಾರೀ ಮಳೆ–ಬಿರುಗಾಳಿಗೆ, ತೋಟಗಾರಿಕೆ ಬೆಳೆಗಳು ನೆಲಕಚ್ಚಿವೆ. ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲೂಕಿನ, ದೇಗಲಮಡಿ ಗ್ರಾಮದಲ್ಲಿ, ಸಾವಿರಾರು ಬಾಳೆ ಗಿಡಗಳು, ಬಿದ್ದಿವೆ. ಆರು ರೈತರಿಗೆ ಸೇರಿದ, 12 ಎಕರೆ ಬೆಳೆ, ಸಂಪೂರ್ಣ ಹಾನಿಯಾಗಿದೆ.

<><><>

**ಬೀದರ ಜಿಲ್ಲೆ, ಮಂದಕನಹಳ್ಳಿಯಲ್ಲಿ,** ಐದು ಎಕರೆ ಹಾಗೂ ಕೋಳಾರ ಗ್ರಾಮದಲ್ಲಿ, 1 ಎಕರೆ ಪಪ್ಪಾಯ ಬೆಳೆ ಹಾಗೂ, ಬೀದರ ತಾಲೂಕು ವ್ಯಾಪ್ತಿಯಲ್ಲಿ, 15 ಮನೆಗಳಿಗೆ ಹಾನಿಯಾಗಿದೆ.

<><><>

**ಭಾರತದ ಮುಕುಂದ ಶಶಿಕುಮಾರ,** ಬೆಂಗಳೂರಿನಲ್ಲಿ ಆಯೋಜಿತ, ಎಸ್.ಎಂ. ಕೃಷ್ಣ ಸ್ಮರಣಾರ್ಥ, ಓಪನ್ ಎ.ಟಿ.ಪಿ. ಚಾಲೇಂಜರ್ಸ್ ಟೆನಿಸ್ ಟೂರ್ನಿಯಲ್ಲಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರನ್ನು ಹೊರತುಪಡಿಸಿ, ಭಾರತದ ಇತರ ಟೆನಿಸ್ ಪಟುಗಳು, 16ರ ಘಟ್ಟದಲ್ಲಿಯೇ ತಮ್ಮ ಹೋರಾಟ ಅಂತ್ಯ ಗೊಳಿಸಿದರು.

<><><>

**ಧಾರವಾಡದ ಪಂಡಿತ ಪುಟ್ಟರಾಜ ಗವಾಯಿಗಳ ಪ್ರತಿಷ್ಠಾನ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ, ಇಂದು ಸಂಜೆ 5.30ಕ್ಕೆ, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಪ್ರಯುಕ್ತ, ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನಗೊಳ್ಳಲಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31ರಂದು ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ಈ ತಿಂಗಳ 29 ರೊಳಗೆ myGov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಬಹುದು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**